**ದಿಃ 25-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಯರ ಪರ ವಕೀಲರಿಂದಃ**

1) ದಾವಾ ಸ್ವತ್ತು ಭೀಮಪ್ಪಾ ಕಾನೋಜಿಯವರು ಮೃತರಾಗುವ ಪೂರ್ವದಲ್ಲಿ ನಮ್ಮ ಕಬ್ಜೆಯಲ್ಲಿ ಇತ್ತು. ಭೀಮಪ್ಪಾ ಕಾನೋಜಿಯವರು ಮೃತರಾದ ನಂತರ ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ನನ್ನ ಮಕ್ಕಳ ಹೆಸರು ದಾಖಲಾಗಿರುತ್ತದೆ. ನಾವು ನೀಡಿದ ಅರ್ಜಿಯ ಆಧಾರದ ಮೇಲಿಂದ ನನ್ನ ಹೆಸರು ಮತ್ತು ನನ್ನ ಮಕ್ಕಳ ಹೆಸರು ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ವಾದಿ 1 ರವರ ಹೆಸರು ಮತ್ತು ಪ್ರತಿವಾದಿ 3 ಮತ್ತು 4 ರವರ ಅ.ಸ.ದಾ.ರ ತಾಯಿ ಎಂದು ವಾದಿ 1 ರವರು ನೀಡಿದ ಅರ್ಜಿಯ ಆಧಾರದ ಮೇಲಿಂದ ವಾದಿಯ ಹೆಸರು ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ. ಸಾಕ್ಷಿಯು ಸ್ವತಃ ಮುಂದುವರೆದು ವಾದಿ 1 ರವರು ಖೊಟ್ಟಿ ರೀತಿಯಿಂದ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸಿದ ನಂತರ ವಾದಿ 1 ರವರು ತಮ್ಮ ಹೆಸರು ದಾಖಲು ಮಾಡಿಕೊಂಡಿರುವ ಸಂಗತಿ ಗೊತ್ತಾಗಿರುತ್ತದೆ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ವಾದಿ 1 ರವರ ಹೆಸರು ದಾಖಲಾಗಿರುವುದನ್ನು ಪ್ರಶ್ನಿಸಿ ಇಲ್ಲಿಯವರೆಗೆ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ.

2) ಭೀಮಪ್ಪಾ ಕಾನೋಜಿಯವರು ನನ್ನ ಗಂಡನಾಗಿರುತ್ತಾನೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಎಂದರೆ

ಸರಿಯಲ್ಲ. ಭೀಮಪ್ಪಾ ಕಾನೋಜಿಯವರು ಬೆಟಗೇರಿ ಗ್ರಾಮದಲ್ಲಿ 15 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಭೀಮಪ್ಪಾ ಕಾನೋಜಿಯವರು ಮದ್ಯಪಾನ ಸೇವನೆ ಮಾಡಿ ಆರೋಗ್ಯ ಕೆಟ್ಟಿದ್ದಕ್ಕಾಗಿ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಭೀಮಪ್ಪಾ ಕಾನೋಜಿಯವರು ಅನಾರೋಗ್ಯದಿಂದ ಬಳಲುತ್ತಿರುವಾಗ ವಾದಿಯರೇ ಭೀಮಪ್ಪಾ ಕಾನೋಜಿಯವರಿಗೆ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಭೀಮಪ್ಪಾ ಕಾನೋಜಿಯವರು ಮೃತರಾದ ನಂತರ ಅಂತ್ಯ ಸಂಸ್ಕಾರವನ್ನು ಸಹ ವಾದಿಯರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3) ಭೀಮಪ್ಪಾ ಕಾನೋಜಿಯವರು ಮೃತರಾದ ನಂತರ ನಾನು ಉತ್ತರ ಜೀವಿತ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಅಂತಹ ಉತ್ತರ ಜೀವಿತ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಭೀಮಪ್ಪಾ ಕಾನೋಜಿಯವರಿಗೆ ಶಿವಕ್ಕಾ , ಗೌರವ್ವಾ ಎನ್ನುವ ಸಹೋದರಿವರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಮೂಲಪುರುಷ ಲಕ್ಷ್ಮಣ ಎಂದರೆ ಸರಿ. ಸದರಿ ಲಕ್ಷ್ಮಣನಿಗೆ ಭೀಮಪ್ಪಾ ಎನ್ನುವ ಗಂಡು ಮಗ ಹಾಗೂ ಶಿವಕ್ಕಾ ಮತ್ತು ಗೌರವ್ವಾ ಎನ್ನುವ ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ನನ್ನ ಮಾವನಾದ ಲಕ್ಷ್ಮಣ ಮತ್ತು ಆತನ ಹೆಂಡತಿ ಗಂಗವ್ವಾ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಅತ್ತೆ ಮಾವನಿಗೆ ಭೀಮಪ್ಪಾ ಒಬ್ಬನೆ ಮಗನಿರುತ್ತಾನೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ವಾದಿ 1 ರವರ ಗಂಡ ಭೀಮಪ್ಪಾ ಕಾನೋಜಿ ಆಗಿರುತ್ತಾನೆ ಎಂದರೆ ಸರಿಯಲ್ಲ. ನಾನು ಭೀಮಪ್ಪಾ ಕಾನೋಜಿಯವರ ಹೆಂಡತಿಯಾಗಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** : **ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.